**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 02 ಎಸ್‌ಸಿಹೆಚ್(2)2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:

## -:: ಸುತ್ತೋಲೇ ::-

**ವಿಷಯ:-** ಭೂಸೇನೆ, ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾ ಸಿಬ್ಬಂದಿಯವರ ಮಕ್ಕಳು:ಅಶ್ರಿತರಿಗೆ **2013-14**ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಜಿ ಕರೆಯುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರಿ ಆದೇಶ ಸಂ: ಇಡಿ 93 ಎಸ್‌ಸಿಎಲ್ 62, ದಿ: 06-09-1963.
2. ಸರ್ಕಾರಿ ಆದೇಶ ಸಂ: ಇಡಿ 37 ಸಿಡಿಪಿ 78, ದಿ: 20-08-1979.

**-00000000-**

**2013-14**ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಕೇಂದ್ರಿಕೃತ ಪ್ರವೇಶ ಘಟಕದ **(Online Interactive Counselling Nodal Centre),** ಮೂಲಕ ಪ್ರವೇಶ ಪಡೆದು ಸರ್ಕಾರಿ:ಖಾಸಗಿ ಅನುದಾನಿತ/ಅನುದಾನರಹಿತ (Online Interactive Counselling Nodal Centre ಗೆ ಸಂಸ್ಥೆಯವರು ಸೀಟುಗಳನ್ನು ಬಿಟ್ಟು ಕೊಟ್ಟಿದ್ದು, ಅಂತಹ ಸೀಟುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರುವವರಿಗೆ ಮಾತ್ರ) ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಭೂಸೇನೆ, ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ಜೂನಿಯರ್ ಕಮೀಷಂಡ್ ಆಪೀಸರ್ ರ್‍ಯಾಂಕ್ ಹಾಗೂ ಅದಕ್ಕಿಂತ ಕಡಿಮೆ ರ್‍ಯಾಂಕ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾ ಸಿಬ್ಬಂದಿಯ ಮಕ್ಕಳು:ಅವಲಂಬಿತರಿಂದ **2013-14**ನೇ ಸಾಲಿನ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ.

ನಮೂದಿತ ಅರ್ಜಿ ಫಾರಂಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಯ ಕಛೇರಿಯಿಂದ ಪಡೆಯಬಹುದಾಗಿದೆ. ಅರ್ಜಿ ಲಭ್ಯವಿಲ್ಲದ ಪಕ್ಷದಲ್ಲಿ, ಈ ಸುತ್ತೋಲೆಯ ಕೆಳಭಾಗದಲ್ಲಿ ನಮೂದಿಸಿರುವ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು.

### 1. ಅರ್ಹತೆಗಳು:-

ಅ) ಕೇಂದ್ರಿಕೃತ ಪ್ರವೇಶ ಘಟಕದ **(Online Interactive Counselling Nodal Centre),** ಮೂಲಕ ಪ್ರವೇಶ ಪಡೆದ ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರು.

ಆ) ವಿದ್ಯಾರ್ಥಿಗಳು ರಕ್ಷಣಾದಳದ ಸಿಬ್ಬಂದಿಯವರ(ಜೂನಿಯರ್ ಕಮೀಷಂಡ್ ಆಫೀಸರ್ ರ್‍ಯಾಂಕ್ ಅಥವಾ ಅದಕ್ಕಿಂತ ಕಡಿಮೆ ರ್‍ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿರುವವರ) ಮಕ್ಕಳು: ಅವಲಂಬಿತರಾಗಿರಬೇಕು. ನಿಯಮಾನುಸಾರ ವಿನಾಯಿತಿ ಪಡೆದಿರಬೇಕು.

ಇ) ಸರ್ಕಾರದ ಆದೇಶ ಕ್ರ. ಸಂ: ಇಡಿ 3 ಸಿಡಿಪಿ 66 ದಿನಾಂಕ: 28-02-1966ರನ್ವಯ ಕಮೀಷಂಡ್ ಅಧಿಕಾರಿಗಳ ಮಕ್ಕಳು:ಅವಲಂಬಿತರು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಲ್ಲ.

ಈ) ರಕ್ಷಣಾ ಸೇವೆಯ ವೆಚ್ಚದಿಂದ ಸಂಬಳ ಪಡೆಯುತ್ತಿದ್ದರು ಭೂಸೇನೆ, ವಾಯುದಳ ಮತ್ತು ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿರುವ ಸಿವಿಲಿಯನ್ ಸಿಬ್ಬಂದಿಯವರ ಮಕ್ಕಳು:ಅವಲಂಭಿತರು ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಲ್ಲ.

## 2. ಅರ್ಜಿಸಲ್ಲಿಸುವ ವಿಧಾನ:-

ಅ) ವಿದ್ಯಾರ್ಥಿಯು ಅರ್ಜಿ ನಮೂನೆಯ ಪೈಕಿ ಭಾಗ 'ಎ' ಅನ್ನು ಭರ್ತಿಮಾಡಿ ಸಂಬಂಧಪಟ್ಟ ರಕ್ಷಣಾ ಅಧಿಕಾರಿಗಳಿಗೆ ದ್ವಿ-ಪ್ರತಿಗಳಲ್ಲಿ ಕಳುಹಿಸಬೇಕು.

ಆ) ಸಂಬಂಧಪಟ್ಟ ರಕ್ಷಣಾ ಇಲಾಖೆ ಅಧಿಕಾರಿಗಳು, ಪಾರ್ಟ್- 'ಬಿ'ಯಲ್ಲಿ ರಕ್ಷಣಾ ಸಿಬ್ಬಂದಿಯವರ ಸೇವಾ ಪೂರ್ಣ ವಿವರವನ್ನು ತುಂಬಿ, ದೃಢೀಕರಿಸಬೇಕು. ಒಂದು ಅರ್ಜಿಯನ್ನು ಸೇವಾ ಕಛೇರಿಯಿಂದ ನೇರವಾಗಿ **ನಿರ್ದೇಶಕರು, ತಾಂತ್ರಿಕ ಶಿಕ್ಷಣಾ ಇಲಾಖೆ, ಬೆಂಗಳೂರು-560 001,** ಇವರಿಗೆ ಕಳುಹಿಸಿಕೊಡಬೇಕು. ಇನ್ನೊಂದು ಅರ್ಜಿಯ ಪ್ರತಿಯನ್ನು ಸಿಬ್ಬಂದಿಯವರ ಸೇವಾ ಪೂರ್ಣ ವಿವರದೊಂದಿಗೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳಿಗೆ ರವಾನಿಸಬೇಕು.

ಇ) ಪಾಲಿಟೆಕ್ನಿಕ್ ಪ್ರಿನ್ಸಿಪಾಲರು, ರಕ್ಷಣಾ ಇಲಾಖೆಯಿಂದ ಬಂದ ಅರ್ಜಿಯನ್ನು **ಪಾರ್ಟ್-'ಎ'** ಮತ್ತು **'ಬಿ'** ಪೂರ್ಣವಾಗಿ ತುಂಬಿರುವುದನ್ನು ಪರಿಶೀಲಿಸಿ **ಪಾರ್ಟ್-'ಸಿ'**ಯಲ್ಲಿ ಪ್ರಿನ್ಸಿಪಾಲರು ಶಿಫಾರಸ್ಸು ಮಾಡಿ, ಸಹಿ ಹಾಗೂ ಮೊಹರು ಹಾಕಿರಬೇಕು. ವಿದ್ಯಾರ್ಥಿಗೆ ಸಂಬಂಧಿಸಿದಂತೆ ಕೆಳಗೆ ಸೂಚಿಸಿರುವ ಪ್ರಮಾಣ ಪತ್ರಗಳ ಪ್ರತಿಯನ್ನು ಲಗತ್ತಿಸಿ, ಹಾಗೂ ಅರ್ಹತೆ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳ ವಿವರವನ್ನು ಅನುಬಂಧ-2 ರಲ್ಲಿ (ಒಂದು ಪ್ರತಿ) ತುಂಬಿ ಈ ಕಛೇರಿಗೆ ಕಳುಹಿಸಿಕೊಡಬೇಕು. ವಿದ್ಯಾರ್ಥಿಗಳ ಅರ್ಜಿಗಳನ್ನು ಪ್ರಸ್ತಾವನೆಯೊಂದಿಗೆ ಒಟ್ಟಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. ಬಿಡಿ ಬಿಡಿಯಾಗಿ ಸಲ್ಲಿಸುವ, ಅಪೂರ್ಣ, ಅರ್ಹತೆ ಹೊಂದಿಲ್ಲದ ಹಾಗೂ ನಿಗಧಿತ ಅವಧಿ ಮೀರಿ ಬರುವ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ನೇರವಾಗಿ ಈ ಕಛೇರಿಗೆ ಕಳುಹಿಸಬಾರದು ಹಾಗೂ ತಂದೆ/ತಾಯಿ ಮತ್ತು ಪೋಷಕರೊಂದಿಗೆ ಈ ಕಛೇರಿಗೆ ಅರ್ಜಿಗಳನ್ನು ಕಳುಹಿಸಬಾರದು. ಈ ಕಛೇರಿಯಿಂದ ಸುತ್ತೋಲೆ ಹೊರಡಿಸಿದ ನಂತರವೇ ಅರ್ಜಿಗಳನ್ನು ಈ ಕಛೇರಿಗೆ ಕಳುಹಿಸುವುದು.

೧). ವಿದ್ಯಾರ್ಥಿಯ ಹಿಂದಿನ ವರ್ಷಗಳ ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಗಳ ಪ್ರತಿಯನ್ನು ಪ್ರತ್ಯೇಕವಾಗಿ ಈ ಕೆಳಗೆ ನಮೂದಿಸಿರುವಂತೆ ಲಗತ್ತಿಸಿರಬೇಕು.

| | |
|---|---|
| **1.** | **ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳು – ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಅಂಕಪಟ್ಟಿ.** |
| **2.** | **ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳು – 1 & 2ನೇ ಸೆಮಿಸ್ಟರ್ ಅಂಕಪಟ್ಟಿಗಳು.** |
| **3.** | **ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳು – 1, 2, 3 & 4ನೇ ಸೆಮಿಸ್ಟರ್ ಅಂಕಪಟ್ಟಿಗಳು.** |
| **ವಿದ್ಯಾರ್ಥಿಯ ಯಾವುದೇ ಸೆಮಿಸ್ಟರ್ ಅಂಕಪಟ್ಟಿಯು ಸಂಬಂಧಪಟ್ಟ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಬಂದಿಲ್ಲದ ಸಂದರ್ಭದಲ್ಲಿ ಆ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಫಲಿತಾಂಶದ ಪ್ರತಿಯನ್ನು ಆಧಾರದ ಮೇಲೆ ಅಂಕಪಟ್ಟಿಯ ನಮೂನೆಯಲ್ಲಿ ಅಂಕ ನಮೂದಿಸಿ, ಪ್ರಿನ್ಸಿಪಾಲರು ದೃಢೀಕರಿಸಿದ ಪ್ರತಿಯನ್ನು ಸಲ್ಲಿಸಬಹುದು.** | |

೨). ಪ್ರವೇಶ ಪಡೆದ ವಿದ್ಯಾರ್ಥಿಗಳು ಕೇಂದ್ರೀಕೃತ ಪ್ರವೇಶ ಘಟಕದಲ್ಲಿ (ನೋಡಲ್ ಸೆಂಟರ್) ಪ್ರವೇಶ ಪಡೆದ ಆದೇಶ (ಸೀಟು ಹಂಚಿಕೆ) ಪ್ರತಿ ಲಗತ್ತಿಸಬೇಕು.

೩). ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಂಡಿರುವ ಹಾಗೂ ಊಟ ಮತ್ತು ವಸತಿ ಸೌಕರ್ಯ ಒದಗಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ಪ್ರಿನ್ಸಿಪಾಲರು ದೃಢೀಕರಿಸಿ ಲಗತ್ತಿಸಿ ಕಳುಹಿಸಿಕೊಡಬೇಕು.

೪). ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧ-1ರಲ್ಲಿರುವಂತೆ ಅವಲಂಬಿತ ಪ್ರಮಾಣ ಪತ್ರ (ವಿದ್ಯಾರ್ಥಿಯು ರಕ್ಷಣಾ ಸಿಬ್ಬಂದಿಯ ಸಹೋದರ/ಸಹೋದರಿಯಾಗಿದ್ದರೆ ಮಾತ್ರ) ಲಗತ್ತಿಸಬೇಕು.

3. ಅರ್ಜಿಯನ್ನು ಕಾಲೇಜುಗಳಲ್ಲಿ ಸ್ವೀಕರಿಸಲು ಕೊನೆಯ ದಿನಾಂಕವನ್ನು **25-10-2013** ಎಂದು ನಿಗಧಿಪಡಿಸಿದೆ. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಬಾರದು. ವಿದ್ಯಾರ್ಥಿವೇತನ ಮಂಜೂರಾತಿಯಲ್ಲಿ ವಿಳಂಬವನ್ನು ತಪ್ಪಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಿದ್ಯಾರ್ಥಿಗಳಿಂದ ಎಲ್ಲಾ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಂಸ್ಥೆಯ ಕಛೇರಿಯಲ್ಲಿ ಪರಿಶೀಲಿಸಿದ ನಂತರವೇ ಪ್ರಾಂಶುಪಾಲರ ಸಹಿಯೊಂದಿಗೆ ಈ ಕಛೇರಿಗೆ ದಿನಾಂಕ: **30-10-2013** ರೊಳಗೆ ಕಳುಹಿಸಬೇಕು.ನಿಗಧಿಪಡಿಸಿದ ದಿನಾಂಕದ ನಂತರ ಬರುವ ಅರ್ಜಿಗಳನ್ನು ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಪರಿಗಣಿಸಲಾಗುವುದಿಲ್ಲ.

4. **ಭೋಜನ ಮತ್ತು ವಸತಿ ಶುಲ್ಕ:-**

ವಿದ್ಯಾರ್ಥಿಯು ಪಾಲಿಟೆಕ್ನಿಕ್ ತರಗತಿಗೆ ಪ್ರವೇಶ ಪಡೆದ ದಿನಾಂಕದಿಂದ ಶೈಕ್ಷಣಿಕ ವರ್ಷ ಮುಗಿಯುವವರೆಗೆ.

| | | | |
|---|---|---|---|
| 1. | ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿದ್ದರೆ ಅಥವಾ ಊಟ ವಸತಿ ಬಗ್ಗೆ ಸ್ವಂತ ಏರ್ಪಾಡು ಮಾಡಿಕೊಂಡಿದ್ದರೆ ತಿಂಗಳಿಗೆ | - | ₹ 70/-ರಂತೆ |
| 2. | ವಿದ್ಯಾರ್ಥಿಯ ತಂದೆ ತಾಯಿ ಜೊತೆಯಲ್ಲಿದ್ದರೆ ತಿಂಗಳಿಗೆ | - | ₹ 15/-ರಂತೆ |
| 3. | ಗ್ರಂಥಾಲಯದ ಭತ್ಯೆ ವರ್ಷಕ್ಕೆ | - | ₹ 100/-ರಂತೆ |
| 4. | ವಸ್ತ್ರ ಭತ್ಯೆ ವರ್ಷಕ್ಕೆ | - | ₹ 50/-ರಂತೆ |

***ವಿದ್ಯಾರ್ಥಿಯ ಅರ್ಜಿ ನಮೂನೆಯನ್ನು ಅವರ ಬಳಿಯಲ್ಲಿ ಕಳುಹಿಸಿ ಕೊಡಬಾರದಾಗಿಯೂ ಪ್ರಾಂಶುಪಾಲರಿಗೆ ತಿಳಿಸಿದೆ. ಒಂದು ವೇಳೆ ನೀವು ಕಳುಹಿಸಿಕೊಟ್ಟರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು, ಇದಕ್ಕೆ ನೇರ ಹೊಣೆ ಪ್ರಾಂಶುಪಾಲರೆ ವಹಿಸ ಬೇಕಾಗಿರುತ್ತದೆ.***

***ಅಪೂರ್ಣವಾದ, ಸಹಿಯಿಲ್ಲದ ಅರ್ಜಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಮತ್ತು ನಿಗಧಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ಕಾರಣಗಳಿಗಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೈತಪ್ಪಿದಲ್ಲಿ, ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.***

***ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರ, ಅರ್ಜಿನಮೂನೆ ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು.***

***http: dte.kar.nic.in***

ಸಹ ನಿರ್ದೇಶಕರು(ಆ)

***ಇವರಿಗೆ,***

1. **ಪ್ರಿನ್ಸಿಪಾಲರು, ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಅನುದಾನ ರಹಿತ ಇಂಜನಿಯರಿಂಗ್ ಕಾಲೇಜುಗಳು (ಒಂದು ಪ್ರತಿ ಸೂಚನಾ ಫಲಕಗಳಿಗೆ) ಇವರ ಗಮನಕ್ಕಾಗಿ ಹಾಗೂ ಅನುಬಂಧ-1 ಮತ್ತು 2 ನಮೂನೆಯನ್ನು ಮಾಹಿತಿಗೆ ಲಗತ್ತಿಸಲಾಗಿದೆ.**
2. ಈ ನಿರ್ದೇಶನಾಲಯದ ಸೂಚನಾ ಫಲಕಕ್ಕೆ.
3. ಪಿ.ಆರ್.ಓ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

## ಅನುಬಂಧ-1
## ಅವಲಂಬಿತ ಪತ್ರ

**ಸಂಖ್ಯೆ: ಇಡಿ 21 ಸಿಡಿಪಿ 64** **ದಿನಾಂಕ: 16/10/1965ರಂತೆ**

ಶ್ರೀ:

ಶ್ರೀಮತಿ______________________________________________

ಕಾಲೇಜಿನಲ್ಲಿ ಓದುತಿರುವವರು ರಕ್ಷಣಾ ದಳದಲ್ಲಿ__________________________

ಯೂನಿಟ್‌ನಲ್ಲಿ______________________________ರ್‍ಯಾಂಕ್‌ನಲ್ಲಿ__________

____________________ಸಂಖ್ಯೆ____________________________

ಯಲ್ಲಿರುವವರ ಸಹೋದರ/ಸಹೋದರಿಯಾಗಿದ್ದು, ಅವರು ಸಂಪೂರ್ಣ ಅವಲಂಬಿತರಾಗಿದ್ದಾರೆ ಎಂದು ಮೇಲೆ ಹೇಳಿದ ಸರ್ಕಾರಿ ಆದೇಶದ ಪ್ರಕಾರ ಪರಿಶೀಲಿಸಿ ದೃಢೀಕರಿಸಿದೆ.

**ಕಾಲೇಜು ಮುಖ್ಯಸ್ಥರು**

**<u>ಸೂಚನೆ:-</u>**

ಈ ಪ್ರಮಾಣ ಪತ್ರವನ್ನು ವಿದ್ಯಾರ್ಥಿ ಅವರ ಕುಟುಂಬದವರಿಗೆ ರಕ್ಷಣಾ ದಳದವರಿಂದ ಹಣ ಸ್ವೀಕರಿಸುವುದಕ್ಕೆ ಮನಿ ಆರ್ಡರ್ ಫಾರಂ ನೀಡಿದ ಆಧಾರದ ಮೇಲೆ ಪ್ರಮಾಣೀಕರಿಸಿ ದೃಢೀಕರಿಸಿಬೇಕು.

# ಕರ್ನಾಟಕ ಸರ್ಕಾರ

**(ತಾಂತ್ರಿಕ ಶಿಕ್ಷಣ ಇಲಾಖೆ)**

## ಅನುಬಂಧ–೨

ರಕ್ಷಣಾ ದಳದ ಸೇವೆಯಲ್ಲಿರುವವರ ಮಕ್ಕಳಿಗೆ ಅವಲಂಬಿತರಿಗೆ ೨೦೧೩–೧೪ ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡಲು ಪ್ರಸ್ತಾವನೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ನೌಕರರ ಹೆಸರು ಮತ್ತು ವಿದ್ಯಾರ್ಥಿಯೆ ಊಡನೆ ಸಂಬಂಧ | ಜೀವಂತ ರಾಗಿರುವರೆ ಅಸಮರ್ಥರೆ ಅಥವಾ ಮರಣ ಹೊಂದಿರುವರೆ | ಜೀವಂತ ರಾಗಿದ್ದರೆ ನೌಕರಿಯ ವಿವರ | ವಿದ್ಯಾರ್ಥಿಯು ಯಾವ ಸಾಲಿನಲ್ಲಿ ಓದುತ್ತಿರುವ ತರಗತಿ ಮತ್ತು ವಿಭಾಗ | ಅಭ್ಯರ್ಥಿ ಯಾವ ಕೋಟಾ ದಲ್ಲಿ ಸೀಟು ಪಡೆದಿ ರುತ್ತಾನೆ | ವಿದ್ಯಾರ್ಥಿಯು ತೇರ್ಗಡೆಯಾಗಿದ್ದಾನೆಯೇ ಅಥವಾ ಅದೇ ತರಗತಿಯಲ್ಲಿ ಇದ್ದಾನೆಯೇ | ವಿದ್ಯಾರ್ಥಿಯು ವಾಸಿಸುತ್ತಿರುವ ವಿದ್ಯಾರ್ಥಿ ನಿಲಯದ ಹೆಸರು | ವಿದ್ಯಾರ್ಥಿಯು ಊಟ ಮತ್ತು ವಸತಿಯ ಬಗ್ಗೆ ಏರ್ಪಾಡು ಮಾಡಿ ಕೊಂಡಿರುವ ಸ್ಥಳದ ವಿವರ | ಅರ್ಜಿ ಪ್ರಥಮ ವಾಗಿ ನವೀಕರಿ ಸುವುದಕ್ಕೂ | ಈ ವಿದ್ಯಾರ್ಥಿ ವೇತನವು ಹಿಂದಿನ ವರ್ಷ ಮಂಜೂರಾಗಿದ್ದರೆ ಮಂಜೂರಾತಿ ಆಜ್ಞೆಯ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

**ವಿದ್ಯಾರ್ಥಿ ವೇತನಕ್ಕೆ ಶಿಫಾರಸ್ಸು ಮಾಡಿರುವ ಪ್ರಮಾಣ ಪತ್ರಗಳು:**

೧) ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಖಾಯಂ ವಾಸಸ್ಥರಾದ ರಕ್ಷಣಾ ದಳದ ನೌಕರರ ಮಕ್ಕಳು ಅವಲಂಬಿತರಾಗಿದ್ದಾರೆ.

೨) ವಿದ್ಯಾರ್ಥಿಯು ಶಾಲೆಗೆ ಪ್ರವೇಶ ಪಡೆಯುವಾಗ ವಂತಿಗೆಯನ್ನು ನೀಡಿಲ್ಲವೆಂದು ದೃಢೀಕರಿಸಬೇಕು.

೩) ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ವಿದ್ಯಾರ್ಥಿ ವೇತನದ ಹಣವನ್ನು ಪೂರ್ತಿಯಾಗಿ ವಿದ್ಯಾರ್ಥಿಗಳಿಗೆ ಪಾವತಿ ಮಾಡಲಾಗಿದೆ.

೪) ಪಾವತಿ ಮಾಡದೇ ಉಳಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಪ್ರತಿಯನ್ನು ಕಳುಹಿಸಿದೆ ಎಂದು ದೃಢೀಕರಿಸಲಾಗಿದೆ.

೫) ವಿದ್ಯಾರ್ಥಿಗಳು ಉಚಿತ ಸೀಟು ಪಡೆದವರು ಎಂದು ದೃಢೀಕರಿಸಲಾಗಿದೆ.

**ಪ್ರಿನ್ಸಿಪಾಲರು**

# ಅನುಬಂಧ-2

**ಪಾಲಿಟೆಕ್ನಿಕ್ ಹೆಸರು:** . . . . . . . . . . . . . . . . . . . . . . . . . . . . . . . .

ರಕ್ಷಣಾ ದಳದ ಸೇವೆಯಲ್ಲಿರುವವರ ಮಕ್ಕಳಿಗೆ/ಅವಲಂಬಿತರಿಗೆ **2013-14ನೇ** ಸಾಲಿನಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡಲು ಪ್ರಸ್ತಾವನೆ.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ನೌಕರರ ಹೆಸರು ಮತ್ತು ವಿದ್ಯಾರ್ಥಿ ಯೊಡನೆ ಸಂಬಂಧ | ಜೀವಂತ ರಾಗಿರುವರೆ ಅಸಮರ್ಥರೆ ಅಥವಾ ಮರಣ ಹೊಂದಿರುವರೆ | ಜೀವಂತ ರಾಗಿದ್ದರೆ ನೌಕರಿಯ ವಿವರ | ವಿದ್ಯಾರ್ಥಿಯು ಯಾವ ಸಾಲಿನಲ್ಲಿ ಓದುತ್ತಿರುವ ವರ್ಷ ಮತ್ತು ವಿಭಾಗ | ಅಭ್ಯರ್ಥಿ ಯಾವ ಕೋಟಾದಲ್ಲಿ ಸೀಟು ಪಡೆದಿರುತ್ತಾನೆ | ವಿದ್ಯಾರ್ಥಿಯು ತೇರ್ಗಡೆಯಾಗಿ ದ್ದಾನೆಯೇ ಅಥವಾ ಅದೇ ತರಗತಿ ಯಲ್ಲಿ ಇದ್ದಾನೆಯೇ | ವಿದ್ಯಾರ್ಥಿಯು ವಾಸಿಸುತ್ತಿರುವ ವಿದ್ಯಾರ್ಥಿ ನಿಲಯದ ಹೆಸರು | ವಿದ್ಯಾರ್ಥಿಯು ಊಟ ಮತ್ತು ವಸತಿಯ ಏರ್ಪಾಡು ಮಾಡಿ ಕೊಂಡಿರುವ ಸ್ಥಳ ವಿವರ | ಅರ್ಜಿ ಪ್ರಥಮವಾಗಿ /ನವೀಕರಿಸು ವುದಕ್ಕೂ | ಈ ವಿದ್ಯಾರ್ಥಿವೇತನವು ಹಿಂದಿನ ವರ್ಷ ಮಂಜೂರಾಗಿದ್ದರೆ ಮಂಜೂರಾತಿ ಆಜ್ಞೆಯ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** |
| 1 | | | | | | | | | | | | |
| 2 | | | | | | | | | | | | |
| 3 | | | | | | | | | | | | |
| 4 | | | | | | | | | | | | |

**<u>ವಿದ್ಯಾರ್ಥಿವೇತನಕ್ಕೆ ಶಿಫಾರಸ್ಸು ಮಾಡಿರುವ ಪ್ರಮಾಣ ಪತ್ರಗಳು:</u>**

01) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳ ತರಗತಿ ಹಾಜರಾತಿ, ನಡತೆ ಮತ್ತು ಪ್ರಗತಿ ತೃಪ್ತಿಕರವಾಗಿದೆ. ಮೇಲ್ಕಂಡ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆಂದು ದೃಢೀಕರಿಸಿದೆ. ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ಸೀಟು ಪಡೆದವರು ಹಾಗೂ ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆಯುವಾಗಿ ಯಾವ ವಂತಿಗೆ ಹಣವನ್ನು ನೀಡಿಲ್ಲವೆಂದು ದೃಢೀಕರಿಸಲಾಗಿದೆ.

02) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಬೇರೆ ಯಾವ ಶುಲ್ಕ ವಿನಾಯಿತಿ/ವಿದ್ಯಾರ್ಥಿ ವೇತನ ದೊರೆಯುತ್ತಿಲ್ಲ.

03) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳಿಗೆ ಹಣವನ್ನು ಬೇರೆ ಯಾವ ಬಿಲ್‌ನಲ್ಲೂ ಕ್ಲೈಮ್ ಮಾಡಿರುವುದಿಲ್ಲ.

04) ಮುಂದೆ ಕೋರಿಕೆಯಲ್ಲಿ ಏನಾದರೂ ತಪ್ಪಿದ್ದಲ್ಲಿ ಅಂತಹ ಹಣವನ್ನು ಸಂಸ್ಥೆಯ ವತಿಯಿಂದ ಸರ್ಕಾರಕ್ಕೆ ಮರುಪಾವತಿ ಮಾಡುತ್ತೇವೆಂದು ದೃಢೀಕರಿಸಿದೆ.

05) ವಿದ್ಯಾರ್ಥಿಯ ಹೇಳಿಕೆ ಹಾಗೂ ದಾಖಲೆಗಳಲ್ಲಿ ಮುಂದೆ ಏನಾದರೂ ತಪ್ಪೆಂದು ತಿಳಿದು ಬಂದಲ್ಲಿ ಪಡೆದಿರುವ ಶುಲ್ಕ ವಿನಾಯಿತಿಯ ಮೊಬಲಗನ್ನು ವಾಪಸ್ಸು ಸಂದಾಯ ಮಾಡುತ್ತೇವೆಂದು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆಯಲಾಗಿದೆ.

06) ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಸ್ಥರಾಗಿದ್ದಾರೆ ಮತ್ತು ನಿಯಮಾನುಸಾರ ವ್ಯಾಸಂಗ ಮಾಡಿರುತ್ತಾರೆ ಅಥವಾ ವಿನಾಯಿತಿ ಪಡೆದಿರುತ್ತಾರೆಂದು ದೃಢೀಕರಿಸಿದೆ.

07) ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಖಾಯಂ ವಾಸಸ್ಥರಾದ ರಕ್ಷಣ ದಳದ ನೌಕರರ ಮಕ್ಕಳು ಅವಲಂಬಿತರಾಗಿದ್ದಾರೆ. / ನಿಯಮಾನುಸಾರ ವಿನಾಯಿತಿ ಪಡೆದಿರುತ್ತಾರೆಂದು ದೃಢೀಕರಿಸಿದೆ.

08) ಹಿಂದಿನ ವರ್ಷದಲ್ಲಿ ಮಂಜೂರಾಗಿದ್ದ ವಿದ್ಯಾರ್ಥಿ ವೇತನದ ಹಣವನ್ನು ಪೂರ್ತಿಯಾಗಿ ವಿದ್ಯಾರ್ಥಿಗಳಿಗೆ ಪಾವತಿ ಮಾಡಲಾಗಿದೆ.

09) ಪಾವತಿ ಮಾಡದೇ ಉಳಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಪ್ರತಿಯನ್ನು ಕಳುಹಿಸಿದೆ ಎಂದು ದೃಢೀಕರಿಸಲಾಗಿದೆ. (ಚಲನ್ ವಿವರ________________________________)

**ಪ್ರಿನ್ಸಿಪಾಲರ ಸಹಿ ಮತ್ತು ಮೊಹರು.**

# <u>ಅನುಬಂಧ–೨</u>

**ಮಂಜೂರಾತಿ ಜ್ಞಾಪನ ಸಂಖ್ಯೆ:** **ದಿನಾಂಕ:**

**ಸಂಸ್ಥೆಯ ಹೆಸರು:**

| ಕ್ರ. ಸಂ. | ವಿದ್ಯಾರ್ಥಿಯ ಹೆಸರು ಮತ್ತು ತರಗತಿ | ವ್ಯಾಸಂಗ ಮಾಡುತ್ತಿರುವ ಕೋರ್ಸ್ ಮತ್ತು ವರ್ಷ | ವಾಚನಾಲಯ ಮತ್ತು ಸಂಘದ ಶುಲ್ಕ ವರ್ಷಕ್ಕೆ | ಪರೀಕ್ಷಾ ಶುಲ್ಕ ವರ್ಷಕ್ಕೆ | ವೈದ್ಯ ಕೀಯ ಶುಲ್ಕ ವರ್ಷಕ್ಕೆ | ಪ್ರವೇಶ ಶುಲ್ಕ ವರ್ಷಕ್ಕೆ | ಕ್ರೀಡಾ ಶುಲ್ಕ ವರ್ಷಕ್ಕೆ | ವಸ್ತ್ರ ಭತ್ಯೆ ವರ್ಷಕ್ಕೆ | ಪುಸ್ತಕ ಸಹಾಯ ಧನ ವರ್ಷಕ್ಕೆ | ಬೋಧನಾ ಶುಲ್ಕ ವರ್ಷಕ್ಕೆ | ಊಟದ ಮತ್ತು ವಸತಿಭತ್ಯೆ ತಿಂಗಳಿಗೆ | ಒಟ್ಟು ಮೊತ್ತ (೧೦ ತಿಂಗಳಿಗೆ ಊಟ ಮತ್ತು ವಸತಿಭತ್ಯೆ ಸೇರಿ |
|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

**ಸಹ ನಿರ್ದೇಶಕರು.**

<u>**ಸೂಚನೆ:**</u> ಊಟ ಮತ್ತು ವಸತಿ ಭತ್ಯೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು ಎಷ್ಟು ತಿಂಗಳುಗಳ ಕಾಲ ವಿದ್ಯಾರ್ಥಿನಿಲಯ ಸಂಬಂಧಿತ ಮನೆ ಹಾಗೂ ಸ್ವಂತ ಏರ್ಪಾಡು ಮಾಡಿಕೊಂಡಿರುವುದನ್ನು ಲಿಖಿತ ಸ್ಟ್ಯಾಂಪ್ ರಶೀದಿಗಳ ಆಧಾರದ ಮೇಲೆ ಪ್ರಿನ್ಸಿಪಾಲರು ಖಚಿತಪಡಿಸಿಕೊಂಡು ಅಷ್ಟು ತಿಂಗಳುಗಳಿಗೆ ಮಾತ್ರ ಊಟ ಮತ್ತು ವಸತಿ ಭತ್ಯೆಗೆ ಸಂಬಂಧಿಸಿದ ಬಿಲ್ಲನ್ನು ಮಾಡತಕ್ಕದ್ದು.